ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1993
ಸದಸ್ಯರ ಹೆಸರು	:	ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	:	ಕಂದಾಯ ಸಚಿವರು
ಉತ್ತರಿಸುವ ದಿನಾಂಕ	:	16.03.2022

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕೊಡಗು ಜಿಲ್ಲೆಯಲ್ಲಿ, ಕುಟುಂಬದ ಸರ್ವಸದಸ್ಯರ ಆಸ್ತಿಯಾಗಿರುವ ಜಮ್ಮಾ ಆಸ್ತಿಗೆ ಸಂಬಂಧಿಸಿದಂತೆ, 2000-01ನೇ ಸಾಲಿನಲ್ಲಿ ಕೊಡಗು ಜಿಲ್ಲಾಧಿಕಾರಿಗಳ ಆದೇಶವನ್ನು ಆಧರಿಸಿ ಪಟ್ಟೇದಾರರ ಹೆಸರನ್ನು ಆರ್.ಟಿ.ಸಿ.ಯ ಮೂರನೇ ಕಾಲಂನಿಂದ ಒಂಭತ್ತನೇ ಕಾಲಂಗೆ ವರ್ಗಾಯಿಸಿರುವುದರಿಂದ, ಪಟ್ಟೇದಾರರ ವಂಶಸ್ಥರಿಗೆ ಮಾತ್ರ ಇಡೀ ಆಸ್ತಿಯ ಮೇಲ ಹಕ್ಕು ಲಭಿಸಿದ್ದು, ಕುಟುಂಬದ ಇತರ ಸದಸ್ಯರು ಅತಂತ್ರರಾಗಿರುವ ಗಂಭೀರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ;	2000ನೇ ಇಸವಿಯ ಪೂರ್ವದಲ್ಲಿ ಕೊಡಗು ಜಿಲ್ಲೆಯಲ್ಲಿ ಪಹಣಿಗೆ ಬದಲಾಗಿ ಜಮಾಬಂದಿ ವಹಿ ಚಾಲ್ತಿಯಲ್ಲಿರುತದೆ. ಕುಟುಂಬದ ಹಿರಿಯ ವ್ಯಕ್ತಿಯನ್ನು ಪಟ್ಟೇದಾರರೆಂದು ಕರೆಯಲಾಗುತ್ತಿದ್ದು, ಸದರಿ ಪಟ್ಟೇದಾರರ ಹೆಸರು ಜಮಾಬಂದಿಯ 3ನೇ ಕಾಲಂನಲ್ಲಿ ಅದೇ ಕುಟುಂಬದ ಇತರೆ ಹಕ್ಕುದಾರರ ಹೆಸರು ಜಮಾಬಂದಿಯ 6ನೇ ಕಾಲಂನಲ್ಲಿ ದಾಖಲಿದ್ದುದ್ದಾಗಿದೆ. ಕೊಡಗು ಜಿಲ್ಲೆಯಾದ್ಯಂತ 2000ನೇ ಇಸವಿಯ ಪೂರ್ವದಲ್ಲಿ ಜಾರಿಯಲ್ಲಿದ್ದಂತಹ ಜಮಾಬಂದಿ ಪದ್ಧತಿಯನ್ನು ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಸಿಎಂಪಿ/02/2000-01, ದಿನಾಂಕ:25.1.2002ರನ್ವಯ ಆರ್.ಟಿ.ಸಿಗೆ ತರ್ಜುಮೆಗೊಂಡು ಭೂ ದಾಖಲೆಗಳನ್ನು ಗಣಕೀಕರಿಸುವ ಸಂದರ್ಭದಲ್ಲಿ ಜಮಾಬಂದಿ 3ನೇ ಕಾಲಂನಲ್ಲಿ ದಾಖಲಿದ್ದ ಖಾತೆದಾರರ ಹೆಸರನ್ನು ಅದಕ್ಕೆ ತತ್ಸಮಾನವಾಗಿ ಆರ್.ಟಿ.ಸಿಯ ಕಾಲಂ 9ರಲ್ಲಿ ದಾಖಲಿಸಲಾಗಿರುತ್ತದೆ ಹಾಗೂ ಜಮಾಬಂದಿ 6ನೇ ಕಾಲಂನಲ್ಲಿ ದಾಖಲಿದ್ದ ಇತರೆ ಹಿಡುವಳಿದಾರರ ಹೆಸರುಗಳನ್ನು ಜಂಟಿ ಖಾತೆದಾರರನ್ನಾಗಿ ಯಥಾವತ್ತಾಗಿ ದಾಖಲಿಸಲಾಗಿರುತ್ತದೆ. ಕೊಡಗು ಜಿಲ್ಲೆಯಲ್ಲಿ ಜಮ್ಮ ಮುಂತಾದ ಕುಟುಂಬದ ಅವಿಭಜಿತ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಹೆಚ್ಚಾಗಿ ನೊಂದಾಯಿತ ಪಾಲುಪಾರಿಕತ್ತು ಆಗದೇ ಇದ್ದು, ಪಾಲುಪಾರಿಕತ್ತು ಹಾಜರುಪಡಿಸಿದ್ದಲ್ಲಿ ಮ್ಯುಟೇಷನ್ ಮೂಲಕ ಭೂ ದಾಖಲೆಗಳಲ್ಲಿ ಅಗತ್ಯ ಬದಲಾವಣೆಗಳಿಗೆ ಅವಕಾಶವಿರುತ್ತದೆ.
ಆ.	ಬಂದಿದ್ದಲ್ಲಿ, ಜಮ್ಮಾ ಆಸ್ತಿಯಲ್ಲಿ ಸಮಾನ ಹಕ್ಕು ಹೊಂದಿದ್ದರೂ, ಕೊಡಗು ಜಿಲ್ಲಾಧಿಕಾರಿಗಳ ಸದರಿ ಆದೇಶದ ಅನುಷ್ಠಾನದ ತರುವಾಯ, ಹಕ್ಕು ದೊರೆಯದಿರುವ ಕುಟುಂಬದ ಇತರ ಸದಸ್ಯರ ಹಿತರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮವೇನು ?	
ಇ.	ಹಕ್ಕು ದೊರೆಯದಿರುವ ಕುಟುಂಬದ ಇತರ ಸದಸ್ಯರ ಹಿತರಕ್ಷಣೆಗೆ ಸರ್ಕಾರ ಕೂಡಲೇ ಸೂಕ್ತ ಕ್ರಮ ವಹಿಸುವುದೇ ;	ಜಮ್ಮಾ ಆಸ್ತಿಗೆ ಸಂಬಂಧಿಸಿದಂತೆ ಪಹಣಿ ಕಾಲಂ 9ರಲ್ಲಿ ಕುಟುಂಬದ ಹಿರಿಯ ವ್ಯಕ್ತಿಯನ್ನು ಜಮಾಬಂದಿ ದಾಖಲೆ ಆಧರಿಸಿ ಸದರಿ ಕುಟುಂಬದ ಪಟ್ಟೆದಾರನನ್ನಾಗಿ ದಾಖಲು ಮಾಡಿದ್ದು, ಪಟ್ಟೆದಾರರು ಪೌತರಾದಲ್ಲಿ ಸದರಿಯವರ ಮರಣ ದೃಢೀಕರಣ ಪತ್ರ ಹಾಜರುಪಡಿಸಿ ಪಟ್ಟೆದಾರರ ಹೆಸರು ವಜಾಗೊಳಿಸಬಹುದಾಗಿರುತ್ತದೆ.

ಸಂಖ್ಯೆ:ಆರ್‌ಡಿ 81 ಟಿಆರ್‌ಎಂ 2022

(ಆರ್. ಅಶೋಕ)
ಕಂದಾಯ ಸಚಿವರು